ಶ್ರೀ ಎ. ಆರ್. ಬದರಿನಾರಾಯಣ್.—ಅದರ ಬಗ್ಗೆ ಆಗಲೇ ಕ್ರಮ ತೆಗೆದುಕೊಂಡಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಸಹ ಆವಾಗಲೇ ತೆಗೆದುಕೊಂಡಿದ್ದಾರೆ.

† ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಈಗಾಗಲೇ ಹನೂರಿನಿಂದ ಕೌದಳ್ಳಿಗೆ ೧೧. ಕೆವಿ. ಲೈನ್ ಸರ್ಕ್ಯೂಟ್ ಮಾಡಬೇಕೆಂದು ಒಂದು ಅಂದಾಜು ತಯಾರಾಗಿದೆ, ಅದು ಈಗ ಎಂ. ಎಸ್. ಇ. ಬಿ, ಯವರ ಪರಿಶೀಲನೆಯಲ್ಲಿದೆ.

ಶ್ರೀ ಆರ್. ರಾಚೇಗೌಡ : ಅದನ್ನು ಎಷ್ಟು ವರ್ಷದಲ್ಲಿ ಮಂಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಿ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಅದನ್ನು ತೀವ್ರಗತಿಯಲ್ಲಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ ಆದಕ್ಕೆ ಕನಿಷ್ಠ ಪ್ರಮಾಣದ ಕಾಲ ಎಷ್ಟು ಬೇಕೋ ಅಷ್ಟು ಕಾಲ ತೆಗೆದುಕೊಳ್ಳುತ್ತೇವೆ.

ELECTRIFICATON OF VILLAGES IN HOLENARASIPURA TALUK AND DANDIGANAHALLI HOBLI

532. SRI H. D. DEVEGOWDA (Holenarsipura) .—

Will the Minister for Public Works and Electricity be pleased to state :—

(*a*) whether it has come to the notice of the Government that Rural Electrification Programme in Holenarasipur taluk and in Dandiganahalli hobli in Channarayapatna taluk is not satisfactory as comared to other areas in the state ;

(*b*) the number of villages electrified so far in Holenarasipura taluk and in Daudiganahalli hobli in Channarayapatna taluk ;

(*c*) whether any estimate has been prepared for drawing Sub-transmission Lines in Holenarasipur taluk and also in Dandiganahalli hobli in Channarayapatna taluk ;

(*d*) if so. the estimated cost of each sub- Transmission line ;

(*e*) when these works will be completed?

SRI H. M. Channabasappa (Minister for Public Works and Electricity).—

(*a*) No.

(*b*) 64 villages in Holenarasipur taluk and 5 villages in Dandiganahalli hobli in Channarayapatna taluk have been electrified upto the end of June 1972.

(SRI H M. CHANNABSAPPA)

(*c*) and (*d*) Proposals for extension of the following sub-tratemission lines have been received and are being examined by the Board :-

Sl. No.	Sub-transmission Lines	Estimated cost
	Holenarasipur taluk	Rs.
1.	11 KV line from Jandalkoppal to Attichwadanahalli.	1,20,000
2.	11 KV line from Doddabygatahalli to Makavalli.	68,000
3.	11 KV line from Annechakanahalli to Nagaranahalli.	51,000
4.	11 KV line from H. N, Pur to Somanahalli.	1,40,000
5.	11 KV line from Muddanahalli to Bidarakka	1,27,000
	Dandiganahalli hobli	
1.	11 KV line from Tehgigere to Udayapura *Via* Kodihalli.	1,15,000
2.	13·2. KV line from Vogarahalli to Kolikundi.	1,90,000

(*e*) It is not possible to indicate the time required to complete these works since several aspects like technical feasibility and availability of funds are involved.

ಶ್ರೀ ಹೆಚ್. ಡಿ. ದೇವೇಗೌಡ : ತಾವು (ಅ) ಗೆ ಉತ್ತರವಾಗಿ ೧೯೭೨ನೇ ಇಸವಿಯ ಜೂನ್ ಮಾಹೆಯ ಅಂತ್ಯದವರೆಗೆ ಹೊಳೆನರಸೀಪುರ ತಾಲ್ಲೂಕಿನ ೬೪ ಗ್ರಾಮಗಳು ಹಾಗೂ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ೫೫ ಗ್ರಾಮಗಳನ್ನು ವಿದ್ಯುದೀಪಕರಣಗೊಳಿಸಲಾಗಿದೆ ಎಂದು ಹೇಳಿದ್ದೀರಿ ಆಂದರೆ ಒಟ್ಟು ೬೯ ವಿಲೇಜಸ್ ಆದ ಹಾಗೆ ಆಯಿತು. ಆದೇ (೫) ಗೆ ಉತ್ತರವಾಗಿ ವಿದ್ಯುತ್ ಉಪ ಮಾರ್ಗಗಳನ್ನು ವಿಸ್ತರಿಸುವುದಕ್ಕೆ ಸಂಬಂಧಿಸಿದಂತೆ ಸಲಹೆಗಳು ಬಂದಿದ್ದು ಅವುಗಳನ್ನು ಮಂಡಲಿಯವರಂ ಪರಿಶೀಲಿಸುತ್ತಿದ್ದಾರೆ ಎಂದು ಹೇಳಿದ್ದೀರಿ. ನಾನು ಒಟ್ಟಿನಲ್ಲಿ ಹೇಳುವುದು ಏನೆಂದರೆ ಈ ಎರಡು ಹೋಬಳಿಯಿಂದಲೂ ಕೂಡ ಸುಮಾರು ೬೦ ಹಳ್ಳಿಗಳು ಇವೆ. ಇವಕ್ಕೆಲ್ಲಾ ಸಬ್‌ಟ್ರಾನ್ಸ್‌ಮಿಷನ್ ಲೈನ್ ಹಾಕುವುದಕ್ಕೆ ತಕ್ಕ ಕಾರ್ಯ ಕ್ರಮಗಳನ್ನು ಹಾಕಿಕೊಂಡು ಈ ಕೆಲಸವನ್ನು ತೀವ್ರವಾಗಿ ಚುರುಕುಗೊಳಿಸುವುದಕ್ಕೆ ಸರ್ಕಾರದ ಆದೇಶ ಕೊಡುವರೇ ? ಇಷ್ಟು ಹೇಳಿದರೆ ಸಾಕು.

† ಶ್ರೀ ಹೆಚ್ ಎಂ ಚೆನ್ನಬಸಪ್ಪ : ಇದರ ಬಗ್ಗೆ ಈಗಾಗಲೇ ಅನೇಕ ಸಂದರ್ಭಗಳಲ್ಲೂ ತಿಳಿಸಿದ್ದೇನೆ. ಎಲ್ಲೆಲ್ಲಿ ವಿದ್ಯುತ್ತಿನ ಭಾಗಗಳು ಇವೆ ಅಲ್ಲಿ ಸಬ್ ಟ್ರಾನ್ಸ್ ಮಿಷನ್ ಲೈನನ್ನು ಎಳೆದು ಹತ್ತಿರದ ಹಳ್ಳಿಗಳಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡುತ್ತಾ ಇದ್ದೇವೆ ಎಂದು ಈ ಸಭೆಯಲ್ಲಿ ಈಗಾಗಲೇ ಹೇಳಿದ್ದೇನೆ. ಹೊಳೆನರಸೀಪುರದ ತಾಲ್ಲೂಕಿನಲ್ಲಿ ಕೇವಲ ೨೫ ಪರ್ಸೆಂಟು ವಿದ್ಯುಚ್ಛಕ್ತಿ ಒದಗಿಸಿದೆ. ಸ್ಪೇಟ್ ಆವರೇಜ್‌ದೆ ತೆಗೆದುಕೊಂಡರೆ ಅಲ್ಲಿ ಕಡಿಮೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಎಷ್ಟು ಚುರುಕುಗೊಳಿಸಿ ಕೆಲಸ ಮಾಡಬೇಕೋ ಅಷ್ಟು ಚುರುಕುಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಶ್ರೀ ಕೋಣಂದೂರು ಲಿಂಗಪ್ಪನವರ ಪ್ರಶ್ನೆಯನ್ನು ಹಾಕುವುದಕ್ಕೆ ನನಗೆ ಅನುಮತಿ ಕೊಡಿ.

ಅಧ್ಯಕ್ಷರು : ಆಗಬಹುದು.